

# ಜಾರು ಹಾದಿಯಲ್ಲಿ ದೇವದಾರು

**ದೇವದಾರುವಿನ ಘಮದ ಬೆನ್ನುಹತ್ತಿ ಹೋದಾಗ ತಿಳಿದದ್ದು ಅದರ ಅಸ್ತಿತ್ವಕ್ಕೆ ಅಪಾಯ ಎದುರಾಗಿರುವ ಕಥೆ.**

■ ವಿನು ಗಂಗೆ

ಕಳೆದ ವರ್ಷ ನಮ್ಮ ಅಜ್ಜನವರ ಹಳೇ ಮನೆ ಕೆಡವಿದಾಗ ದೊರೆತ ಕೆಲವು ತೊಲೆಗಳು ಮಂದ ಸುವಾಸನೆ ಬೀರುತ್ತಿದ್ದವು. ಇದು ಯಾವ ಮರ? ಗಂಧವಂತೂ ಅಲ್ಲ. ಆದರೂ ಸುವಾಸನೆ ಬೀರುತ್ತಿದೆಯಲ್ಲ! ಹುಡುಕಾಟ ನಡೆಸಿದಾಗ ಅದು ದೇವದಾರು ಎಂದು ಬಲ್ಲವರಿಂದ ತಿಳಿಯಿತು. ಬಹಳ ಎತ್ತರಕ್ಕೆ ಬೆಳೆಯಬಲ್ಲ ಮಂದ ಸುವಾಸನೆಯ ಮರ ದೇವದಾರು.

ದೇವದಾರು! ಹೆಸರೇ ಸಮ್ಮೋಹನಗೊಳಿಸಿತು, Mesmerizing. ದಾರು ಎಂದರೆ ಚೌಬೀನೆ ಅಥವಾ ಕಟ್ಟಿಗೆ ಎಂದು. ಅದರ ದಾರುವನ್ನು ದೇವದಾರು ಎನ್ನುತ್ತಾರೆ ಎಂದರೆ ಖಂಡಿತಾ ಸುಮ್ಮನೆ ಹೆಸರಿಟ್ಟಿಲ್ಲ. ಅಂದಿನಿಂದ ಶುರುವಾಯಿತು ನನ್ನ ಹುಡುಕಾಟ. ನಮ್ಮ ಹಳೆ ಮನೆ ಸುಮಾರು ಎಪ್ಪತ್ತು ವರ್ಷಗಳ ಹಿಂದಿನದು. ಆಗ ಸುಲಭವಾಗಿ ಸಿಗುತ್ತಿದ್ದ ದೇವದಾರು ಮರವನ್ನು ನಮ್ಮ ಮನೆಗೆ ತೊಲೆಯಾಗಿ ಬಳಸಿದ್ದಾರೆ. ಈಗ ನಮ್ಮ ಊರಲ್ಲಿ ದೇವದಾರು ಮರ ಎಲ್ಲಿದೆ ಎಂದರೆ ಯಾರಿಗೂ ಗೊತ್ತಿಲ್ಲ.



ಬೆಳೆಸಲೇ ಬೇಕು ಎನಿಸಿ ನನಗೆ ಗೊತ್ತಿದ್ದ ಫಾರೆಸ್ಟ್ ಗಾರ್ಡ್ ಒಬ್ಬರನ್ನು ವಿಚಾರಿಸಿದೆ. ಅವರು ಇಲಾಖೆಯ ನರ್ಸರಿಗೆ ಬೀಜಗಳನ್ನು ಕೊಟ್ಟಿರುವುದಾಗಿ ಹೇಳಿದರು. ಆ ನರ್ಸರಿಯಲ್ಲಿ ವಿಚಾರಿಸಿದಾಗ, ‘ಸಸಿಗಳನ್ನು ಕೊಡಲಿಕ್ಕೆ ಮೇಲಿನ ಅಧಿಕಾರಿಗಳ ಸಮ್ಮತಿ ಬೇಕು’ ಎಂದು ಹೇಳಿದರು. ಸಲ್ಲಿಸಿದ ಬೇಡಿಕೆ ಉಪಯೋಗಕ್ಕೆ ಬರಲಿಲ್ಲ.

ನನಗೆ ತಿಳಿದ ಕೆಲವು ಅರಣ್ಯಾಧಿಕಾರಿಗಳ ನೆರವು ಕೇಳಿದೆ. ಸಾರ್ವಜನಿಕರಿಗೆ ದೇವದಾರು ಸಸಿಯನ್ನು ಕೊಡುವ ಅವಕಾಶ ಇಲ್ಲ ಎಂದುಬಿಟ್ಟರು. ಬಹುಶಃ ಅಕೇಶಿಯಾ, ನೀಲಗಿರಿ, ಹೆಬ್ಬೇವು, ರೈನ್ ಟ್ರೀ, ಮಹಾಗನಿಯಂತಹ ಮರಗಳನ್ನು ಮಾತ್ರ ಸಾರ್ವಜನಿಕರಿಗೆ ನೀಡಬಹುದೇನೋ?

ಮತ್ತೇನು ಮಾಡುವುದು? ನಮ್ಮ ಹಳೆಸೊರಬದ ಹತ್ತಿರದ ಕಾಡುಗಳಲ್ಲಿ ಆ ಮರಗಳು ಸ್ವಲ್ಪವಾದರೂ ಉಳಿದಿರಬಹುದೆಂದು ಆ ರಸ್ತೆಯಲ್ಲಿ ಹೋಗುವ ಬರುವ ಸ್ವಲ್ಪ ಹಿರಿಯರಾದ ಬೈಕ್ ಸವಾರರನ್ನು ನಿಲ್ಲಿಸಿ ಕೇಳಿದೆ. ಅವರೂ ‘ಇಲ್ಲಿತ್ತು ಮರ, ಈಗಿಲ್ಲ’ ಎಂದರಷ್ಟೇ.

ಹಿಡಿದ ಛಲ ಬಿಡಲು ಆ ದೇವದಾರಿನ ಘಮದ ನೆನಪು ಬಿಡುತ್ತಿರಲಿಲ್ಲ. ಆಗ ನನ್ನ ಹಿರಿಯ ಸ್ನೇಹಿತರೊಬ್ಬರು ನೆರವಿಗೆ ಬಂದರು. ಪಶ್ಚಿಮ ಘಟ್ಟಗಳ ಒಂದು ನರ್ಸರಿಯ ದಾರಿ ತೋರಿಸಿ, ಉನ್ನತ ಅಧಿಕಾರಿಗಳ ಶಿಫಾರಸ್ಸು ಮಾಡಿಸಿ, ನನಗೆ ದೇವದಾರುವಿನ ಸಸಿ ಕೊಡಲು ಹೇಳಿದರು. ಇಷ್ಟು ದಿನ ಹುಡುಕಾಡಿದರೂ ಇನ್ನೂ ದೊಡ್ಡದೊಂದು ದೇವದಾರು ಮರ ನೋಡಲಾಗದೆ ಹೋದರೂ, ಕುಟುಂಬ ಸಮೇತರಾಗಿ ದೂರದ ನರ್ಸರಿಗೆ ಹೋಗಿ ತಂದ ಆರು ಸಸಿಗಳೂ ಭೂಮಿ ಸೇರಿ ಬೇರು ಕೊಡುತ್ತಿರುವ ಸಮಾಧಾನ ಇದೆ.

ಹಿಮಾಲಯದ ದೇವದಾರುವಿಗೆ Cedar Deodar ಎನ್ನುವುದು ಶಾಸ್ತ್ರೀಯ ಹೆಸರು. ನಮ್ಮದಕ್ಕೆ Dysoxylum Malabaricum ಎನ್ನುವ ಹೆಸರು. ಅಂತರರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟ ದೇವದಾರುವನ್ನು ಅಳಿವಿನಂಚಿನಲ್ಲಿ ಇರುವ ಪ್ರಭೇದಗಳ ಸಾಲಿಗೆ ಸೇರಿಸಿದೆ.

ದೇವದಾರುವಿನಿಂದ ಸುಗಂಧ ತೈಲ, ಗಂಧದ ಕಡ್ಡಿ ತಯಾರಿಕೆ ಮಾಡಲಾಗುತ್ತದೆ. ಸಂಪೂರ್ಣ ವಿನಾಶದಂಚಿನಲ್ಲಿರುವ ಮರದ ಕಥೆಯನ್ನು ನಿಮ್ಮ ಮಕ್ಕಳಿಗೆ, ಮೊಮ್ಮಕ್ಕಳಿಗೆ ಹೇಳಿ. ದೇವದಾರು ಅವರಿಗೂ ತಿಳಿಯಲಿ.

ಪ್ರತಿಕ್ರಿಯಿಸಿ: feedback@sudha.co.in

SANDHILIN सन्धिलिन
ಸಂಧಿಲಿನ್
ಸಂಧಿಲಿನ್ ಹಚ್ಚಿ
ನೋವಿಗೆ ವಿದಾಯ ಹೇಳಿ!
ಶೀಘ್ರ ಪರಿಣಾಮಕಾರಿ


- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
- ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
- ‘ಸಂಧಿಲಿನ್’ ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph.: 0820 2520852, 89709 77513
Email: sdmaph@gmail.com
ಇದು ‘SDM ಆಯುರ್ವೇದ ಫಾರ್ಮಸಿ’ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ